

# ಪಕ್ಷಿಪ್ರೇಮಿಗಳ ಕಬೂತರ್ ಖಾನಾ

ಪುಟ 37ರಿಂದ..

ಹೆರಿಟೇಜ್ ಸ್ಥಳವಾಗಿ 'ದಾದರ್ ಕಬೂತರ್ ಖಾನಾ' ಈಗಲೂ ತನ್ನ ಗೌರವ ಉಳಿಸಿಕೊಂಡಿದೆ. 'ಗೇಟ್ ವೇ ಆಫ್ ಇಂಡಿಯಾ' ಬಳಿಯ ತಾಜ್ ಹೊಟೇಲ್ ಎದುರಿಗಿರುವ ಮತ್ತು ಮರೀನ್ ಡ್ರೈವ್‌ನಂತಹ ಕ್ಷೇತ್ರದಲ್ಲಿನ ಕಬೂತರ್ ಖಾನಾಗಳೂ ಈಗ ಹಿಂದಿನ ಮಹತ್ವ ಕಳೆದುಕೊಂಡು ಇತಿಹಾಸದ ಪುಟಗಳನ್ನು ಸೇರಿವೆ.

ಪಾರಿವಾಳಗಳು ಸಂಜೆಯ ನಂತರ ಏನೂ ತಿನ್ನುವುದಿಲ್ಲ. ರಾತ್ರಿಯಲ್ಲಿ ಅವಕ್ಕೆ ಹೆಚ್ಚು ಕಾಣುವುದಿಲ್ಲ. ಹಾಗಾಗಿ ಸಂಜೆಯ ನಂತರ ತಿರುಗಾಡುವುದಿಲ್ಲ.

## ಪಾರಿವಾಳಗಳಿಗೆ ಲಸಿಕೆ

ಪಾರಿವಾಳಗಳಿಗೆ ಪೋಲಿಯೋದಂತಹ ರೋಗಗಳು ಬಾರದಂತೆ ಲಸಿಕೆ ನೀಡುವುದಿದೆ. ಪಶುಪಕ್ಷಿ ಸಂರಕ್ಷಣಾ ಕ್ಷೇತ್ರದಲ್ಲಿ ಕಾರ್ಯನಿರತ ಸಂಸ್ಥೆ 'ಮಾನವ ಮಂದಿರ್ ಟ್ರಸ್ಟ್' ದಕ್ಷಿಣ ಮುಂಬಯಿಯ ಹಲವಾರು ಕಬೂತರ್ ಖಾನಾಗಳಲ್ಲಿ ಸಾವಿರಾರು ಪಾರಿವಾಳಗಳಿಗೆ ಲಸಿಕೆ ನೀಡುತ್ತದೆ. ಮುಂಬಯಿ ಚೌಪಾಟಿ, ಮರೀನ್ ಡ್ರೈವ್, ನರೀಮನ್ ಪಾಯಿಂಟ್, ಗೇಟ್‌ವೇ ಆಫ್ ಇಂಡಿಯಾ, ಗ್ವಾಲಿಯಾ ಟ್ಯಾಂಕ್..... ಮೊದಲಾದೆಡೆ ಧಾನ್ಯಗಳಿಗೆ ಲಸಿಕೆಯನ್ನು (ಔಷಧಿ) ಸಿಂಪಡಿಸಿ ಪಾರಿವಾಳಗಳಿಗೆ ತಿನ್ನಿಸಲಾಗುತ್ತದೆ. ಈ ಅಭಿಯಾನದಿಂದ ಪ್ರತೀವರ್ಷ ಹಲವು ಸಾವಿರ ಪಾರಿವಾಳಗಳು ಸಾವನ್ನಪ್ಪುವುದರಿಂದ ಪಾರಾಗುತ್ತವೆ. ಮುಂಬಯಿ ಮನಪಾದ ಆರೋಗ್ಯಾಧಿಕಾರಿಗಳು ಹೇಳುವಂತೆ, ಪಾರಿವಾಳಗಳೂ ಮನುಷ್ಯರಲ್ಲಿ ರೋಗವನ್ನು ಹುಟ್ಟಿಸಬಲ್ಲವು. ಅವುಗಳಿಂದಾಗಿ ತುರಿಕೆ, ಅಸ್ತಮಾ ಇತ್ಯಾದಿ ಶ್ವಾಸಕ್ಕೆ ಸಂಬಂಧಿಸಿದ ರೋಗಗಳೂ ಬರುವ ಸಾಧ್ಯತೆಗಳಿವೆಯಂತೆ.

ಕಬೂತರ್ ಖಾನಾಗಳ ಅಕ್ಕಪಕ್ಕದ ಅಂಗಡಿಗಳಲ್ಲೂ ಪಕ್ಷಿಪ್ರೇಮಿಗಳಿದ್ದಾರೆ. ಅವರೆಲ್ಲ ತಮ್ಮ ಸಂಪಾದನೆಯ ಸಣ್ಣ ಪಾಲು ಪಾರಿವಾಳಗಳಿಗೆ ಹಾಕುತ್ತಾರೆ.

ಮಕರ ಸಂಕ್ರಾಂತಿ ಬರುತ್ತಲೇ ಮುಂಬಯಿಯಲ್ಲಿ ಪತಂಗ ಹಾರಿಸುವ ಸಂಪ್ರದಾಯ ಬಹಳ ಹಳೆಯದು. ಆದರೆ ಈ ಬಾರಿ ಪತಂಗ ಹಾರಾಟದಲ್ಲಿ ಹಿಂದಿನ ಉತ್ಸಾಹ ಕಂಡುಬರಲಿಲ್ಲ. ಜಾಯಿಂಟ್ ಪೊಲೀಸ್ ಕಮಿಶನರ್ ದೇವೆನ್ ಭಾರತಿಯವರು ಪತಂಗ ಹಾರಾಟದಲ್ಲಿನ ನೈಲಾನ್ ನೂಲು, ಜಿಂಕ್, ಗಾಜಿನ ಲೇಪನ... ಇತ್ಯಾದಿ ಮಾರಕ ವಸ್ತುಗಳ ಪತಂಗದ ಕಾರಣ ಆಕಾಶದಲ್ಲಿ ಹಾರುವ ಪಕ್ಷಿಗಳಿಗೆ ಜೀವಹಾನಿ ತರುತ್ತವೆ ಎಂಬ ನಿಟ್ಟಿನಲ್ಲಿ ಪತಂಗ ಹಾರಾಟಕ್ಕೆ ನಿಷೇಧವನ್ನು ಹೇರಿದ್ದರು. ಜೈನ ಶಕ್ತಿ ಫೌಂಡೇಶನ್ ಮತ್ತು ವಿಭಿನ್ನ ಸಂಸ್ಥೆಗಳ ಪ್ರತಿನಿಧಿ ಮಂಡಲಗಳು ದೇವೆನ್ ಭಾರತಿ ಅವರನ್ನು ಭೇಟಿಯಾಗಿ ಒಂದು ಮನವಿ ಸಲ್ಲಿಸಿದ್ದರು. ಮಹಾರಾಷ್ಟ್ರ ಸರ್ಕಾರ ಕೂಡ ತನ್ನ ಆದೇಶವೊಂದರಲ್ಲಿ ನೈಲಾನ್ ನೂಲಿನ ಪತಂಗ ಹಾರಾಟ ಮಾನವ ಜೀವ ಮತ್ತು ಪಕ್ಷಿಗಳಿಗೆ ಹಾನಿಕಾರಕ ಎಂದು ಅದನ್ನು ನಿಷೇಧಿಸಿದೆ.

ಪ್ರತಿ ವರ್ಷ ಮಕರ ಸಂಕ್ರಾಂತಿಯ ಸಮಯ ಹಾರಿಸುವ ಗಾಳಿಪಟದ ಕಾರಣ ದೊಡ್ಡ ಸಂಖ್ಯೆಯಲ್ಲಿ ಪಕ್ಷಿಗಳು ನೈಲಾನ್ ನೂಲಿಗೆ ಸಿಕ್ಕಿ ಸಾಯುತ್ತವೆ. ಈ ವರ್ಷ 2017 ರಲ್ಲಿ 60 ಕ್ಕೂ ಹೆಚ್ಚು ಗಾಯಾಳು ಪಕ್ಷಿಗಳನ್ನು ಪರೇಲ್‌ನ ವೆಟರ್ನರಿ ಹಾಸ್ಪಿಟಲ್‌ಗೆ ತರಲಾಗಿತ್ತು. ಇವುಗಳಲ್ಲಿ ಮುಕ್ಕಾಲು ಪಾಲು ಪಾರಿವಾಳಗಳು. ಇನ್ನುಳಿದವು ಕಾಗೆ, ಹದ್ದು, ಗೂಬೆಗಳು. 'ಪೀಪಲ್ ಫಾರ್ ಎಥಿಕಲ್ ಟ್ರೀಟ್‌ಮೆಂಟ್ ಅಫ್ ಎನಿಮಲ್' ಇದಕ್ಕಾಗಿ ತುಂಬಾ ಕಾಳಜಿ ವಹಿಸುತ್ತಿದೆ. ದಾದರ್‌ನ 'ಕಬೂತರ್ ಖಾನಾ' ಬಹು ಪ್ರಸಿದ್ಧಿ ಯಾಕೆಂದರೆ ಇದರ ಪಕ್ಕದಲ್ಲಿದೆ ಹನುಮಾನ್‌ಮಂದಿರ, ಜೈನಮಂದಿರ, ಮಸೀದಿ, ಕ್ರಿಸ್ತಾಲಯ– ಹೀಗೆ ಸರ್ವಧರ್ಮ ಸಮ್ಮಿಲನದ ಪವಿತ್ರ ಸ್ಥಳ. ನೀರಿನ ಕುಂಡವಿರುವ ಈ ಕಬೂತರ್ ಖಾನಾವನ್ನು ವಲ್ಜೀ ರತನ್ ಶೀವೊರಾ ಅವರ ನಾಲ್ಕನೇ ಪೀಳಿಗೆ ಈಗ ನೋಡಿಕೊಳ್ಳುತ್ತಿದೆ. ಕೆಲವು ಕಬೂತರ್ ಖಾನಾಗಳಿಗೆ ಶತಮಾನದ ಇತಿಹಾಸವಿದೆ.